ಮೂರು ಹೆಣ್ಣು ಮಕ್ಕಳನ್ನು, ಹೆಂಡತಿಯನ್ನು ಇನ್ನು ಮುಂದೆ ನೀನೇ ಸಾಕ್ಕೋಬೇಕು. ಹೀಗೆ ಹೇಳ್ತಿದ್ದೀನಿ ಅಂತ ಕೋಪಿಸ್ಕೋಬೇಡಾ.'

ಅಂದಿನಿಂದ ಒಂದೇ ಮನೆಯಲ್ಲಿ ಎರಡು ಸಂಸಾರ ಶುರುವಾದವು. ಅವನ ಮಕ್ಕಳು ಅವನಂತೆಯೇ ಸರಸ್ವತಿಯನ್ನು ಹೊಡೆದು ಓಡಿಸಿಬಿಟ್ಟವರು. ವಿದ್ಯೆಯೂ ಇಲ್ಲ. ಹಣವೂ ಇಲ್ಲ. ಹೇಗೆ ಅವರಿಗೆ ಮದುವೆ ಮಾಡುವುದು ಎಂಬುದೇ ದೊಡ್ಡ ಸಮಸ್ಯೆಯಾಗಿತ್ತು.

ಈಗಿನ ಸಮಸ್ಯೆ ಇದಲ್ಲ. ಸದ್ಯದ ಸಮಸ್ಯೆ ಅವನು ಕಾಫಿ ಕುಡಿಯಲೇಬೇಕು. ನಿನ್ನೆಯೇ ಅವನ ಹೆಂಡತಿ ಹೇಳಿದ್ದಳು: 'ಕಾಫಿ ಪುಡಿ ಇಲ್ಲ. ಹಣ ತಂದರೆ ಕಾಫೀ, ಇಲ್ಲಾಂದ್ರೆ ತೀರ್ಥ ಕುಡಿದು ಸುಮ್ಮನಾಗಿ. ನಾನು ಮನೆ ಮನೆಗೆ ಹೋಗಿ ಸಾಲ ತರಲು ತಯಾರಿಲ್ಲ.'

ರಾಜಪ್ಪ ಮನೆಯೊಳಗೆ ಬಂದ. ಹಾಲಿನಲ್ಲಿ ಅವನ ತಮ್ಮ ಬೆಂಚಿನ ಮೇಲೆ ಕುಳಿತಿದ್ದ. ಕೈಯಲ್ಲಿ ದಿನಪತ್ರಿಕೆ. ಅವನ ಹತ್ತಿರ ಹಬೆಯಾಡುವ ಕಾಫಿ. ದಿನಪತ್ರಿಕೆಯಲ್ಲಿ ನೆಟ್ಟಿದ್ದ ದೃಷ್ಟಿಯನ್ನು ಸರಿಸಿ ಒಂದು ಗಳಿಗೆ ಅಣ್ಣನನ್ನು ದಿಟ್ಟಿಸಿ ನೋಡಿದ. ಬೆಳಗ್ಗೆ ಎದ್ದಕೂಡಲೇ ಕಾಫಿ ಕುಡಿಯದೆ ಅಣ್ಣ ಎಷ್ಟು ಕಷ್ಟಪಡುತ್ತಾನೆ ಎಂಬುದು ಅವನಿಗೆ ತಿಳಿಯದ ವಿಷಯವಲ್ಲ. ಅವನು ಏನಂದುಕೊಂಡನೋ, ತಕ್ಷಣ ಎದ್ದು ಒಳಗೆ ಹೋದ. ಬಹುಶಃ ಹೆಂಡತಿಯ ಬಳಿ ಇದರ ಬಗ್ಗೆ ಹೇಳಲು ಹೋಗಿರಬಹುದು. ಬಹಳ ಸಮಯ ಹೊರ ಬರದೆ ಇದ್ದರೆ ಅವನ ಶಿಫಾರಸಿಗೆ ಫಲ ಸಿಗಲಿಲ್ಲ ಎಂದು ಅರ್ಥ. ಅವಳು ದೈವಕೃಪೆಯಿಂದ ಕಾಫಿ ಕೊಡಲು ಸಮ್ಮತಿಸಿದರೆ ತಮ್ಮ ಏನು ಮಾಡುತ್ತಾನೆ ಎಂಬುದು ಒಂದು ಸ್ವಾರಸ್ಯಕರವಾದ ವಿಷಯ. ಅವನು ಹಾಲಿಗೆ ಬಂದು ಬೆಂಚಿನ ಮೇಲೆ ಕುಳಿತುಕೊಂಡು ಸ್ವಲ್ಪ ಎತ್ತರದ ಧ್ವನಿಯಲ್ಲಿ, 'ಲೇ, ರಾಜಪ್ಪನಿಗೆ ಕಾಫಿ ತಾರೇ' ಎಂದು ಹೇಳುತ್ತಾನೆ. ಅವನ ಮಾತನ್ನು ಮಡದಿ ಚಾಚೂ ತಪ್ಪದೆ ಪಾಲಿಸುತ್ತಾಳಂತೆ!

ರಾಜಪ್ಪ ಸ್ವಲ್ಪ ಹೊತ್ತು ಅಲ್ಲೇ ನಿಂತಿದ್ದ. ಒಳಗೆ ಹೋದ ತಮ್ಮ ಹೋದವನು ಹೋದನಷ್ಟೆ! ತನಗೆ ಕಾಫಿ ದೊರಕದೆಂದು ಅವನಿಗೆ ಖಚಿತವಾಗಿ ತಿಳಿಯಿತು.

ಅವನು ಹಿತ್ತಲ ಕಡೆ ನಡೆದ. ಅವನ ಹೆಂಡತಿ ಮುಳ್ಳಿನ ಬೇಲಿಯ ಪಕ್ಕದಲ್ಲಿ ನಿಂತಿದ್ದಳು. ಅವನು ಜನಿವಾರವನ್ನು ಕಿವಿಯಲ್ಲಿ ಸಿಕ್ಕಿಸಿಕೊಂಡೇ ಕೇಳಿದ: 'ಏನು?'

'ಅದೇ, ರುಕ್ಕು ಅಡಿಗೆ ಮಾಡ್ತಿದ್ದಾಳೆ. ಸ್ವಲ್ಪ ಅವಳಿಗೆ ನೆರವಾಗಿ. ಹೋಗಿ.'

'ರುಕ್ಕೂನಾ? ಯಾಕೆ ಮೈಥಿಲಿ ಎಲ್ಲಿ?'

'ಅಭಿರಾಮಿ ಮಾಮಿ ಮನೆಯಲ್ಲಿ ರಾಜರಾಜೇಶ್ವರಿ ಪೂಜೆ ಇಟ್ಕೊಂಡಿದ್ದಾರಂತೆ. ಕನ್ಯೆಯರಿಗೆ ಸೀರೆ ಉಡಿಸ್ತಾರಂತೆ. ಕಳಿಸಿಕೊಟ್ಟೆ.'

'ಅಭಿರಾಮಿ ಮನೆಯಲ್ಲೇ? ಸ್ಮಾರ್ತ ಹುಡಿಗಿಯರಿಗಲ್ವೇನೇ ಕೊಡ್ತಾರೆ?'

'ಅಭಿರಾಮಿ ಮಾಮಿ ಕಾಲಿಗೆ ಬೀಳೋದೊಂದು ಬಾಕಿ, ನಾನು ಹಾಗೆ ಬೇಡಿಕೊಂಡೆ. ಮೈಥಿಲಿಗೆ ಹದಿನೆಂಟು ವಯಸ್ಸಾಯಿತು, ಉಟ್ಕೊಳ್ಳೋಕ್ಕೆ ಒಂದು ಒಳ್ಳೇ ಸೀರೆ ಇಲ್ಲ. ಎಲ್ಲಾ ಹರಕಲು. ಮದುವೆ ವಯಸ್ಸಿಗೆ ಬಂದಿರೋ ಹುಡುಗಿ.'

'ಬ್ರಾಹ್ಮಣರಿಗೆ ಊಟ ಇದೆಯೋ?'

'ಸೀರೆ ಉಟ್ಕೊಂಡು ಹೋದ್ರೆ ಉಂಟು.'

ರಾಜಪ್ಪ ತನ್ನ ಹೆಂಡತಿಯನ್ನು ಗುರಾಯಿಸಿದ. ತುಟಿಯಂಚಿನಲ್ಲಿ ಅಂಟಿಕೊಂಡಿದ್ದ ವಿಷಮ ನಗುವಿನೊಂದಿಗೆ ಅವಳು ಹುಲ್ಲಿನ ಕೋಣೆಯ ಕಡೆ ಹೋದಳು.

ಅವನು ಕಿವಿಯಿಂದ ಜನಿವಾರವನ್ನು ತೆಗೆಯುತ್ತಾ ಬಂದಾಗ ಅವಳು ಹುಲ್ಲಿನ ಕೋಣೆಯಲ್ಲಿ ಕುಳಿತಿದ್ದಳು. ಅದರ ಹೆಸರಷ್ಟೇ ಹುಲ್ಲಿನ ಕೋಣೆ. ಒಂದು ಕಾಲದಲ್ಲಿ ಅವನ ತಾತ ಮಿರಾಸು ಎಂದು